ನಿರ್ಮಿಸಲು ಸುಮಾರು 142 ಲಕ್ಷ ರೂಪಾಯಿಗಳ ವೆಚ್ಚವನ್ನು ಅಂದಾಜು ಮಾಡಲಾಗಿದೆ. ಸಕಲೇಶಪುರದಲ್ಲಿ ಬಸ್ ನಿಲ್ದಾಣ ನಿರ್ಮಿಸಲು 97-98ನೇ ಸಾಲಿನ ಆಯವ್ಯಯದಲ್ಲಿ ರೂ. 50 ಲಕ್ಷಗಳನ್ನು ಅಳವಡಿಸಲಾಗಿದೆ. ಸದರಿ ಯೋಜನೆಯಲ್ಲಿ ನಿವೇಶನ ಅಭಿವೃದ್ಧಿ ಕೆಲಸಗಳಿಗೆ ಅಂದಾಜು ಮಾಡಿರುವ ಮೊತ್ತ 50 ಲಕ್ಷಗಳ ನಿಧಿಯನ್ನು ಜಿಲ್ಲಾಧಿಕಾರಿಗಳು, ಮಾನ್ಯ ಶಾಸಕರು, ಸಂಸದರು, ಮಲೆನಾಡು ಅಭಿವೃದ್ಧಿ ಮಂಡಳಿ ಮತ್ತು ಇತರೆ ಸ್ಥಳೀಯ ಸಂಘಗಳ ಮೂಲಕ ಪಡೆಯಲು ಕ್ರಮ ಕೈಗೊಳ್ಳಲಾಗಿದೆ.

2) ಸದರಿ ಯೋಜನೆಯ ಒಟ್ಟಾರೆ ಅಂದಾಜು ವೆಚ್ಚವು 142 ಲಕ್ಷಗಳಾಗಿರುವುದರಿಂದ, ಸದರಿ ನಿವೇಶನದ ಅಭಿವೃದ್ಧಿ ಕೆಲಸಗಳಿಗೆ ಕನಿಷ್ಟ 50 ಲಕ್ಷ ರೂಪಾಯಿಗಳ ಅನುಧಾನವನ್ನು ಮೇಲೆ ತಿಳಿಸಿರುವ ಮೂಲಗಳಿಂದ ಪಡೆಯಲಾಗುವುದು, ಕೆಲಸ ಪ್ರಾರಂಭಿಸಲಾಗುವುದು.

3) ಸದರಿ ಬಸ್ ನಿಲ್ದಾಣದ ಯೋಜನೆಗೆ ಒಟ್ಟಾರೆ ರೂ. 142 ಲಕ್ಷಗಳನ್ನು ಅಂದಾಜು ಮಾಡಲಾಗಿದೆ.

10.00 ಎ.ಎಂ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಿದ್ದಾರೆ. ತುಂಬಾ ಸಂತೋಷವಾಗತಕ್ಕಂಥ ವಿಚಾರ ಎಂದರೆ ಸುಮಾರು 25 ವರ್ಷಗಳ ಸತತ ಪ್ರಯತ್ನ ಇವೊತ್ತು ಒಂದು ರೂಪಕ್ಕೆ ಬಂದಿರತಕ್ಕಂಥದ್ದು. ಈ ರಾಜ್ಯದ ಸಾರಿಗೆ ಸಚಿವರಾದಂಥ ಸನ್ಮಾನ್ಯ ಸಿಂಧ್ಯರವರು ಹಾಗೂ ಸನ್ಮಾನ್ಯ ಬೀಳಗಿರವರಿಗೆ ಈ ಸಂದರ್ಭದಲ್ಲಿ ಅಭಿನಂದಿಸಬೇಕಾಗಿದೆ. ಈ ಕಾರ್ಯಕ್ರಮವನ್ನು ಅವರು ಈಗಾಗಲೇ ಕೈಗೆತ್ತಿಕೊಂಡಿದ್ದಾರೆ ಮತ್ತು ಮುಂದಿನ ನಾಲ್ಕನೇ ತಾರೀಖು ಅಸ್ತಿಭಾರವನ್ನು ಮಾನ್ಯ ಮುಖ್ಯಮಂತ್ರಿಗಳು, ಸಾರಿಗೆ ಮಂತ್ರಿಗಳು ಹಾಗೂ ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ಬಂದು ನೆರವೇರಿಸುವವರಿದ್ದಾರೆ. ಅದರಿಂದ ನಮ್ಮ ಕ್ಷೇತ್ರದ ಜನತೆಯ ಪರವಾಗಿ ಸರ್ಕಾರಕ್ಕೆ ಕೃತಜ್ಞತೆಯನ್ನು ಅರ್ಪಿಸುತ್ತಾ ಅದಷ್ಟು ಜಾಗೃತೆ ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆಯಿತು. ಅದಷ್ಟು ಜಾಗ್ರತೆ ಈ ಕಾರ್ಯಕ್ರಮವನ್ನು ಮುಗಿಸುತ್ತೇವೆ.

ತೀರ್ಥಹಳ್ಳಿ ಮಾರುಕಟ್ಟೆ ಪ್ರಾಂಗಣ ನಿರ್ಮಾಣ

137 - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿಯಲ್ಲಿ ಒಂದು ಮಾರುಕಟ್ಟೆ ಪ್ರಾಂಗಣ ರಚಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಪ್ರಾಂಗಣಕ್ಕಾಗಿ ಎಷ್ಟು ಹಣ ಮೀಸಲಿಡಲಾಗಿದೆ?

ಇ) *ಕಾಮಗಾರಿ ಯಾವಾಗಿನಿಂದ ಪ್ರಾರಂಭಿಸಲಾಗಿದೆ. ತೀರ್ಥಹಳ್ಳಿ ಟಿಎಪಿಸಿಎಂಎಸ್‌ನವರು ಸಂಚಾರಿ ಅಡಿಕೆ ಖರೀದಿ ಕೇಂದ್ರಕ್ಕಾಗಿ ಮಾರುಕಟ್ಟೆ ಇಲಾಖೆಯಿಂದ ಒಂದು ವಾಹನಕ್ಕಾಗಿ ಬೇಡಿಕೆ ಸಲ್ಲಿಸಿದ್ದಾರೆ, ಹಾಗಿದ್ದಲ್ಲಿ ಸರ್ಕಾರವು ಈ ಬೇಡಿಕೆಯನ್ನು ಮಾನ್ಯ ಮಾಡಿದೆಯೇ ?*

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ತೀರ್ಥಹಳ್ಳಿಯಲ್ಲಿ ಉಪ ಮಾರುಕಟ್ಟೆ ಪ್ರಾಂಗಣ ಸ್ಥಾಪನೆಗೆ 5.05 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿದ್ದು, ಸುಮಾರು 77.00 ಲಕ್ಷ ರೂ.ಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಆ) ರೂ. 77.00 ಲಕ್ಷ

ಇ) 1997-98ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಮಂಜೂರಾತಿ ನೀಡಲಾಗಿದೆ. ಪ್ರಾಂಗಣ ನಕ್ಷೆ ಹಾಗೂ ಅಂದಾಜುಗಳನ್ನು ತಯಾರಿಸಲು ಕ್ರಮ ಜರುಗಿಸಲಾಗಿದೆ. ನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ತೀರ್ಥಹಳ್ಳಿ ಟಿಎಪಿಸಿಎಂಎಸ್., ಇವರು ಸಂಚಾರಿ ಅಡಿಕೆ ಖರೀದಿ ಕೇಂದ್ರಕ್ಕೆ ಕೇಳಿರುವ ವಾಹನವನ್ನು ಮಂಜೂರು ಮಾಡಲಾಗಿದೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ತೀರ್ಥ ಹಳ್ಳಿಯಲ್ಲಿ ಉಪ ಮಾರುಕಟ್ಟೆ ಪ್ರಾಂಗಣ ಸ್ಥಾಪನೆಗೆ 5.05 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದೇವೆಂದು ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಸ್ವಾಧೀನ ಪಡಿಸಿಕೊಂಡು ಸಾಕಷ್ಟು ವರ್ಷವಾಗಿದೆ. ಇದೂ ಅಲ್ಲದೆ 15 ಎಕರೆ ಸರ್ಕಾರಿ ಜಾಗವನ್ನೂ ಕೂಡ ಉಪ ಮಾರುಕಟ್ಟೆ ಪ್ರಾಂಗಣ ಸ್ಥಾಪನೆಗೆ ಮಂಜೂರಾತಿ ಆಗಿ ಬಹಳ ವರ್ಷಗಳ ಹಿಂದೆ ಆಗಿದೆ. ನಾವು ಅಡಿಕೆಯನ್ನು ಬೆಳೆಯುತ್ತೇವೆ. ಹಾಗೂ ನಮ್ಮ ತಾಲ್ಲೂಕು ಸಾಕಷ್ಟು ಮಾರುಕಟ್ಟೆ ಸೆಸನ್ನು ಕೊಡತಕ್ಕಂಥ ಪ್ರಮುಖ ತಾಲ್ಲೂಕು ಆಗಿದೆ. ಕೋಟಿಗಟ್ಟಲೆ ಹಣವನ್ನು ಸೆಸ್ ಮುಖಾಂತರ ಕೊಟ್ಟಾಗ್ಯೂ ಕೂಡ ಈ ಇಲಾಖೆ ರೈತರಿಗೆ ಅಭಿವೃದ್ಧಿ ಆಗತಕ್ಕಂಥ ಕೆಲಸವನ್ನು ಮಾಡಲು ವಿಳಂಬ ಏತಕ್ಕೆ ಆಗುತ್ತಿದೆ? ಇನ್ನು ಅದನ್ನು ಪ್ರಾರಂಭ ಮಾಡಲಿಲ್ಲ. ಆದಕಾರಣ ಇದನ್ನು ಯಾವಾಗ ಮಾಡಲಾಗುತ್ತದೆ?

ಶ್ರೀ ಹೆಚ್. ನಾಗಪ್ಪ : ತೀರ್ಥಹಳ್ಳಿಯಲ್ಲಿ ಉಪ ಮಾರುಕಟ್ಟೆ ಪ್ರಾಂಗಣ ಸ್ಥಾಪನೆಗೆ 5.05 ಎಕರೆ ಜಮೀನನ್ನು ನಾಲ್ಕೂವರೆ ಲಕ್ಷ ರೂಪಾಯಿಗಳಿಗೆ ಖರೀದಿ ಮಾಡಲಾಗಿದೆ. ಅದಕ್ಕೆ ಸುಮಾರು 77 ಲಕ್ಷ ರೂಪಾಯಿಗಳ ಒಂದು ಅಂದಾಜುಪಟ್ಟಿಯನ್ನು ಕೂಡ ತಯಾರು ಮಾಡಿ ಕಂಪೌಂಡ್‌ಗೆ 20 ಲಕ್ಷ ರೂಪಾಯಿಗಳು, ನೆಲಮಟ್ಟ ಮಾಡಲು 8 ಲಕ್ಷ ರೂಪಾಯಿ, ರಸ್ತೆ ನಿರ್ಮಾಣಕ್ಕೆ 8 ಲಕ್ಷ ರೂಪಾಯಿ, ಆಡಳಿತ ಕಛೇರಿಗೋಸ್ಕರ 10 ಲಕ್ಷ ರೂಪಾಯಿ, ನೀರು ಸರಬರಾಜಿಗೆ 4 ಲಕ್ಷ ರೂಪಾಯಿಗಳು, ವಿದ್ಯುಚ್ಛಕ್ತಿ ಸರಬರಾಜಿಗೆ 3 ಲಕ್ಷ ರೂಪಾಯಿಗಳು ಮತ್ತು ಐದು ಗೋಡೌನ್‌ಗಳನ್ನು ಕಟ್ಟಿಸಲು 20 ಲಕ್ಷ ರೂಪಾಯಿಗಳನ್ನು ಈಗಾಗಲೇ ಮಂಜೂರು ಮಾಡಲಾಗಿದೆ. ಆದಷ್ಟು ಜಾಗ್ರತೆ ಆ ಕೆಲಸವನ್ನು ಮಾಡುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು 20 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ ಎಂದು ಹೇಳಿದ್ದಾರೆ. ಆದರೆ ಆ ಮಂಜೂರಾತಿ ಆದೇಶ ಶಿವಮೊಗ್ಗ ಉಪ ಮಾರುಕಟ್ಟೆ ಅಧಿಕಾರಿಗಳಿಗೆ ಬಂದಿಲ್ಲ. ಅದನ್ನು ತಕ್ಷಣ ಕಳುಹಿಸಬೇಕು. ಮತ್ತು ಅದನ್ನು ಪ್ರಾರಂಭ ಮಾಡಲು ಅವರಿಗೆ ಒತ್ತಡವನ್ನು ಹಾಕಿ ಆದಷ್ಟು ಬೇಗ ಆ ಕೆಲಸವನ್ನು ಮುಗಿಸಲು ಪ್ರಯತ್ನ ಮಾಡಬೇಕು.

ಶ್ರೀ ಹೆಚ್. ನಾಗಪ್ಪ : ಆದಷ್ಟು ಬೇಗ ಆ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ನಾನು ಅವರಿಗೆ ಆದೇಶವನ್ನು ಕೊಡುತ್ತೇನೆ.

ದಾವಣಗೆರೆಯಲ್ಲಿ ಕೆ.ಎಸ್.ಆರ್.ಟಿ.ಸಿ. ವರ್ಕ್‌ಶಾಪ್ ಪ್ರಾರಂಭ

140 - ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕೊಂಡ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆಯಲ್ಲಿ ಕೆ.ಎಸ್.ಆರ್.ಟಿ.ಸಿ. ವರ್ಕ್‌ಶಾಪ್ ಕೆಲಸದ ಶಂಕು ಸ್ಥಾಪನೆಯಾಗಿ ಎರಡು ವರ್ಷವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಒಂದು ವರ್ಷದಲ್ಲಿ ಉದ್ಘಾಟನೆ ಮಾಡುವುದಾಗಿ ಮಂತ್ರಿಗಳು ಹೇಳಿಕೆ ನೀಡಿದ್ದರೂ ಇದುವರೆಗೂ ಪೂರ್ಣಗೊಳ್ಳದೇ ಇರುವುದಕ್ಕೆ ಕಾರಣಗಳೇನು?

ಇ) ಯಾವಾಗ ಉದ್ಘಾಟನೆ ಮಾಡಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಬಂದಿದೆ.

ಆ) ಈ ಕೆಲಸವನ್ನು ದಿನಾಂಕ:10.5.97ರಂದು ಪ್ರಾರಂಭಿಸಿದ್ದು ಕರಾರು ಒಪ್ಪಂದದ ಪ್ರಕಾರ ದಿನಾಂಕ 9.5.98ರ ಒಳಗಾಗಿ ಪೂರ್ಣಗೊಳ್ಳಬೇಕಿರುತ್ತದೆ. ಕರಾರಿನಂತೆ ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲಾಗುವುದು.

ಇ) ನಿರ್ಮಾಣವು ಪೂರ್ಣಗೊಂಡ ನಂತರ ಉದ್ಘಾಟನೆ ಮಾಡಲಾಗುವುದು.

ಶ್ರೀ ಎಸ್.ಎ. ರವೀಂದ್ರನಾಥ್ : ಮಾನ್ಯ ಅಧ್ಯಕ್ಷರೆ, ನಾನು ಕೆ.ಎಸ್.ಆರ್.ಟಿ.ಸಿ. ವರ್ಕ್‌ಶಾಪ್ ದಾವಣಗೆರೆಗೆ ಮಾಡಬೇಕು ಎಂದು ಕೇಳಿದ್ದೆ. ಅವರು ಅದರ ಪ್ರಕಾರ ಒಪ್ಪಿಕೊಂಡು 9.5.1998ರೊಳಗೆ ಮುಗಿಸುತ್ತೇವೆಂದು ಹೇಳಿದ್ದಾರೆ. ಆದರೆ ಅಲ್ಲಿ ಇಲ್ಲಿಯವರೆಗೆ ಯಾವುದೇ ರೀತಿಯ ಸ್ವಲ್ಪ ಕೆಲಸ ಕೂಡ ಆಗಲಿಲ್ಲ. ಅದು ಸ್ವಲ್ಪ ಹೆಚ್ಚುಕಮ್ಮಿ ಎರಡು ಕೋಟಿ ರೂಪಾಯಿಗಳ ಕೆಲಸ. ಆದರೆ ಅಲ್ಲಿ ಹತ್ತು ಲಕ್ಷ ರೂಪಾಯಿಯ ಕೆಲಸ ಕೂಡ ಆಗಿಲ್ಲ. ಆದರೆ ಮುಂದಿನ ತಿಂಗಳು ಅದನ್ನು ಓಪನ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಅಲ್ಲಿ ಯಾವುದಾದರೂ ಬಸ್ ಕೆಟ್ಟರೆ ಹೊಸಪೇಟೆ ಅಥವಾ ಹಾಸನಕ್ಕೆ ರಿಪೇರಿಗಾಗಿ